ಅ) ಬಿಜಾಪುರ ಜಿಲ್ಲೆಯಲ್ಲಿರುವ ಗ್ರಾಮ ಲೆಕ್ಕಾಧಿಕಾರಿಗಳ ಸಂಖ್ಯೆ ಎಷ್ಟು?

ಆ) ಖಾಲಿ ಇರುವ ಹುದ್ದೆಗಳಿಗೆ ಸರ್ಕಾರವು ಯಾವಾಗ ನೇಮಕಾತಿ ಮಾಡಿಕೊಳ್ಳುತ್ತದೆ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು):

ಅ) 498

ಆ) ಈ ಜಿಲ್ಲೆಯಲ್ಲಿ 46 ಗ್ರಾಮ ಲೆಕ್ಕಿಗರ ಹುದ್ದೆಗಳು ಖಾಲಿ ಇವೆ. ಖಾಲಿ ಇರುವ ಹುದ್ದೆಗಳನ್ನು ತುಂಬುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಬಗರ್ ಹುಕ್ಕುಂ ಜಮೀನುಗಳಿಗೆ ಸರ್ಕಾರದ ಶುಲ್ಕ

530 ಎ-ಶ್ರೀ ರವಿಕಾಂತ್ ಎಸ್. ಪಾಟೀಲ್ (ಇಂಡಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಗರ್ ಹುಕ್ಕುಂನಲ್ಲಿ ಮಂಜೂರು ಮಾಡಿದ್ದಂತಹ ಜಮೀನುಗಳಿಗೆ ಸರ್ಕಾರ ವಿಧಿಸುತ್ತಿರುವ ಶುಲ್ಕವೆಷ್ಟು;

ಆ) ಈ ಶುಲ್ಕವನ್ನು ರದ್ದುಮಾಡಿ ಈ ಸರ್ಕಾರದ ಬಡ ಜನಗಳಿಗೆ ಅನುಕೂಲ ಮಾಡಿಕೊಡಲು ಸರ್ಕಾರದ ಕ್ರಮ ಕೈಗೊಳ್ಳುವುದೆ?

ಅ) ಈ ಹಿಂದೆ ಬಗರ್ ಹುಕುಂನಲ್ಲಿ ಮಂಜೂರು ಮಾಡಿದ ಜಮೀನುಗಳಿಗೆ ಭೂ ಕಂದಾಯದ 200 ಪಟ್ಟು ಕಿಮ್ಮತ್ತನ್ನು ವಿಧಿಸಲಾಗುತ್ತಿತ್ತು.

ಆ) ಸರ್ಕಾರವು ಸದರಿ ಕಿಮ್ಮತ್ತನ್ನು ಪುನರ್ ಪರೀಶೀಲಿಸಿ, 200 ಪಟ್ಟು ಇದ್ದ ಕಿಮ್ಮತ್ತನ್ನು ಭೂ ಕಂದಾಯದ 50 ಪಟ್ಟಿಗೆ ನಿಗಧಿಪಡಿಸಲಾಗಿದೆ. (ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದವರಿಗೆ ಮುಫತ್ತಾಗಿ ಮಂಜೂರು ಮಾಡಲಾಗುತ್ತಿದೆ.)

ಬೆಂಗಳೂರಿನ ಲಾಲ್‌ಬಾಗಿನಲ್ಲಿ ಸಂಗೀತ ಕಾರಂಜಿ

696-ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಲಾಲಬಾಗ್, ಉದ್ಯಾನವನಕ್ಕೆ ಪ್ರತಿ ದಿವಸ ಸಾವಿರಾರು, ಪ್ರವಾಸಿಗಳು ಭೇಟಿ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಪ್ರವಾಸಿಗರ ಆಕರ್ಷಣೆಗಾಗಿ ಲಾಲ್‌ಬಾಗಿನಲ್ಲಿ ಸಂಗೀತ ಕಾರಂಜಿ ನಿರ್ಮಿಸಲು ಸರ್ಕಾರ ಉದ್ದೇಶಿಸಿದೆಯೇ?

ಇ) ಬೆಂಗಳೂರಿನ ರಾಜಭವನದ ಬಳಿ ಸಂಗೀತ ಕಾರಂಜಿ ನಿರ್ಮಿಸಲು ರೈಲ್ವೆ ಇಲಾಖೆಯು ಕ್ರಮ ತೆಗೆದುಕೊಂಡಿರುವುದು ನಿಜವಲ್ಲವೇ?

ಈ) ಹಾಗಿದ್ದಲ್ಲಿ, ಲಾಲ್‌ಬಾಗ್‌ನಲ್ಲಿಯು ಸಂಗೀತ ಕಾರಂಜಿ ನಿರ್ಮಿಸಲು ರೈಲ್ವೆ ಇಲಾಖೆಯು ನೆರವನ್ನು ಕೋರಲು ಸರ್ಕಾರ ಕ್ರಮ ಕೈಗೊಳ್ಳಲಾಗುತ್ತಿದೆಯೇ?